“ಅದೊಂದು ಇದ್ಕೊಳ್ಳಿ ಬಿಡ್ರಿ” ಎಂದು ನಾನು ನಿಯಮವನ್ನು ಸಡಲಿಸಿದೆ.

ರಿಸೆಪ್ಷನ್ ಹಾಲಿನಲ್ಲಿ ಹೆಜ್ಜೆ ಇಟ್ಟವನೇ ತನ್ನ ಹೆಗಲ ಮೇಲಿದ್ದ ಕಂಬಳಿಯನ್ನು ಜಾಡಿಸಿದ. ಒಂದು ಮಣ ದೂಳು ಗಾಳಿಯಲ್ಲಿ ಹಾರಿತು. ಝುಗಝುಗನೆ ಹೊಳೆಯುವ ದೀಪಗಳ ಬೆಳಕಲ್ಲಿ ಆ ದೂಳಿನ ಕಣಗಳು ಸಂತೋಷದಿಂದ ಹಾರಾಡಿದವು.

ಆ ಇಡೀ ದಿನ ಯಾರೂ ಸರಿಯಾಗಿ ಕೆಲಸವನ್ನು ಮಾಡಲಿಲ್ಲ. ಕಂಪೌಂಡಿನ ಲಾನಿನಲ್ಲಿ ಓಡಾಡಿಕೊಂಡಿದ್ದ ಆ ಮೂರು ಕುರಿಗಳು, ಅವುಗಳ ಹತ್ತಿರ ಕೊಡಲಿ ಇಟ್ಟುಕೊಂಡು ಕುಳಿತು, ತಂಬಾಕನ್ನು ಒಣಗಿದ ಎಲೆಯಲ್ಲಿ ಸುರುಳಿ ಸುತ್ತಿದ ಇಷ್ಟು ದಪ್ಪದ ಚುಟ್ಟಾ ಸೇದಿದ ವೆಂಕಯ್ಯ, ಅವನ ಸುತ್ತಲೂ ನೆರೆದು “ಹೌ ಕ್ಯೂಟ್ ವೆಂಕ್ಸ್”, “ವೆಂಕ್ಸ್, ಯು ಆರ್ ಸೊ ಸ್ಮಾರ್ಟ್”, “ಐ ಲವ್ ಇಟ್” ಎಂದು ಉದ್ಗಾರ ಹಾಕುವ ಸೀರೆ ಉಟ್ಟು ಬಂದ ಲಲನಾಮಣಿಯರು! ಅವನ ಜೊತೆಗೆ ಸಾಕಷ್ಟು ಜನರು ಫೋಟೊ ತೆಗೆಸಿಕೊಂಡು ಸಂತೋಷದಿಂದ ಬೀಗುತ್ತಿದ್ದರು. ಇಡೀ



ವೆಂಕಟ್ರಮಣ ಭಟ್